ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

ಅ) ಮೇಲುಕೋಟೆ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ 1955ನೇ ಸಾಲಿನಿಂದ 2001-2002ನೇ ಸಾಲಿನ ಲೆಕ್ಕ ತನಿಖಾ ವರದಿಯಲ್ಲಿ ಒಟ್ಟು ರೂ. 4,66,045-70ಗಳು ವಸೂಲಾತಿಗೆ ಸೂಚಿಸಿದ್ದು, ಈ ಪೈಕಿ ರೂ. 2,15,095-95 ವಸೂಲಾಗಿರುತ್ತದೆ. ರೂ. 2,50,950-70 ವಸೂಲಾತಿಗೆ ಬಾಕಿ ಇರುತ್ತದೆ. ಈ ಬಗ್ಗೆ ಆಡಿಟ್ ವರದಿಗಳಿಗೆ ಅನುವರ್ತನಾ ವರದಿಯನ್ನು ಕಳುಹಿಸಲಾಗಿದೆ. ಆಕ್ಷೇಪಣೆ ಹಾಗೂ ವಸೂಲಾತಿ ಮೊತ್ತಗಳ ಬಗ್ಗೆ ವಸೂಲಾತಿಗೆ ಕ್ರಮ ಜರುಗಿಸಲಾಗಿದೆ.

ಆ) ಶ್ರೀ ನಾರಾಯಣಸ್ವಾಮಿ ದೇವಾಲಯದಲ್ಲಿ ಒಂದೇ ಕುಟುಂಬಕ್ಕೆ ಸೇರಿದ 3 ಜನ ಅರ್ಚಕರು ಇರುತ್ತಾರೆ. ದೇವಾಲಯದ (1) ನಾರಾಯಣಸ್ವಾಮಿ ಸನ್ನಿದಿಯ ಅರ್ಚಕರ ವೃತ್ತಿಯ ಬರಾಬರ್ದೆ ಹುದ್ದೆ ಆಗಿರುತ್ತದೆ. ನಿಯಮಾನುಸಾರ ಅರ್ಚಕರ ನೇಮಕಾತಿ ಆಗಿರುತ್ತದೆ. ಬರಾಬರ್ದೆ ಪದ್ಧತಿಯ ಮರು ನೇಮಕಾತಿ ಸಂದರ್ಭದಲ್ಲಿ ಕ್ರಿಮಿನಲ್ ಅಪರಾಧಿಗಳನ್ನು ನೇಮಕ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ದೇವಾಲಯದಲ್ಲಿ ಯಾವುದೇ ಅನಧಿಕೃತ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿರುವುದಿಲ್ಲ. ನಿಯಮಾನುಸಾರ ಅನುಮತಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ವೇತನ ಪರಿಷ್ಕರಣೆ ಸರ್ಕಾರದಿಂದ ಮಂಜೂರಾತಿ ಪಡೆಯಲಾಗಿದೆ. ಹುದ್ದೆ ಮತ್ತು ಜವಾಬ್ದಾರಿಗೆ ಅನುಗುಣವಾಗಿ ವೇತನ ನಿಗಧಿಪಡಿಸಲಾಗಿದೆ.

## ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ನೌಕರರನ್ನು ಖಾಯಂಗೊಳಿಸುವುದು

2238 (2658) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ನೌಕರರು ಎಷ್ಟು ಜನ ಇರುವರು;

ಆ) ಹಾಗಿದ್ದಲ್ಲಿ, ಸುಮಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ನೌಕರರ ಬಗ್ಗೆ ಸರ್ಕಾರ ಗಮನ ಹರಿಸದಿರಲು ಕಾರಣವೇನು;

ಇ) ಇವರಲ್ಲಿ ಖಾಯಂಗೊಳಿಸಲು ಎಷ್ಟು ಜನ ನ್ಯಾಯಾಲಯದ ಮೊರೆ ಹೋಗಿದ್ದಾರೆ;

ಈ) ನ್ಯಾಯಾಲಯದ ಆದೇಶದಂತೆ ಎಷ್ಟು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ;

ಉ) ಎಲ್ಲರಿಗೂ ಒಂದೇ ಆದೇಶದ ಮೇರೆಗೆ ಸಮಾನತೆ ಕಾಪಾಡಲಾಗುವುದೇ;

ಊ) ಈ ವರ್ಷ ಎಲ್ಲರನ್ನೂ ಖಾಯಂಗೊಳಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ದಿನಾಂಕ 1-7-84ರ ನಂತರ ನೇಮಕಾತಿ ಹೊಂದಿರುವ 1092 ದಿನಗೂಲಿ ನೌಕರರು ಇದ್ದಾರೆ.

ಆ) ದಿನಾಂಕ 1-7-84ರ ನಂತರ ನೇಮಕಾತಿ ಹೊಂದಿದ ದಿನಗೂಲಿ ನೌಕರರ ಸಕ್ರಮಾತಿ ವಿಷಯವನ್ನು ಸರ್ವೋನ್ನತ ನ್ಯಾಯಾಲಯದ ಮುಂದಿದೆ. ಇವರ ಸಕ್ರಮಾತಿಯನ್ನು ಸರ್ವೋನ್ನತ ನ್ಯಾಯಾಲಯವು ನೀಡುವ ತೀರ್ಪನ್ನು ಅವಲಂಭಿಸಿರುತ್ತದೆ.

ಇ) 69 ದಿನಗೂಲಿ ನೌಕರರು ತಮ್ಮನ್ನು ಖಾಯಂಗೊಳಿಸುವಂತೆ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಈ) 71 ದಿನಗೂಲಿ ನೌಕರರನ್ನು ನ್ಯಾಯಾಲಯದ ಆದೇಶದಂತೆ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ.

ಉ) ಸರ್ವೋನ್ನತ ನ್ಯಾಯಾಲಯದ ತೀರ್ಪನ್ನು ಅವಲಂಭಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಊ) ಪ್ರಶ್ನೆ ಸಂಖ್ಯೆ 'ಆ' ಗೆ ನೀಡಿದ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

**ಅರಣ್ಯ ಇಲಾಖೆಯಲ್ಲಿನ ದಿನಗೂಲಿ ನೌಕರರನ್ನು ಖಾಯಂಗೊಳಿಸುವುದು**

2240 (2660) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರು ಎಷ್ಟು ಜನ ಇರುವರು; ಎಷ್ಟು ವರ್ಷದಿಂದ ಕೆಲಸ ಮಾಡುತ್ತಿರುವವರು;

ಆ) ಹಾಗಿದ್ದಲ್ಲಿ, ಇಷ್ಟು ವರ್ಷಗಳಿಂದ ಕೆಲಸ ಮಾಡುತ್ತಿರುವ ಇವರಿಗೆ ಇದುವರೆವಿಗೂ ಖಾಯಂಗೊಳಿಸದಿರಲು ಸರ್ಕಾರಕ್ಕೆ ಇರುವ ತೊಂದರೆಯೇನು;

ಇ) ದಿನಗೂಲಿ ನೌಕರರು ಏನಾದರೂ ನ್ಯಾಯಾಲಯಕ್ಕೆ ಮೊರೆ ಹೋಗಿರುತ್ತಾರೆಯೆ, ಎಷ್ಟು ಜನರು ಹೋಗಿದ್ದಾರೆ;

ಈ) ನ್ಯಾಯಾಲಯದಿಂದ ಖಾಯಂ ಆಗಿರುವ ಮಂದಿ ಎಷ್ಟು; ಯಾರ್ಯಾರು;

ಉ) ಈಗಲಾದರೂ ಸಮಾನತೆಯ ದೃಷ್ಟಿಯಿಂದ ಎಲ್ಲರನ್ನು ಖಾಯಂಗೊಳಿಸಲಾಗುವುದೆ;

ಊ) ಈ ವರ್ಷದಲ್ಲಿ ಮಾಡಲಾಗುವುದೆ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಅರಣ್ಯ ಇಲಾಖೆಯಲ್ಲಿ ಒಟ್ಟು 5040 ದಿನಗೂಲಿ ನೌಕರರು ಇರುತ್ತಾರೆ. ಇವರು 1-7-1984ರ ನಂತರದ ಮತ್ತು 29-1-1990ರ ಮೊದಲಿನ ಅವಧಿಯಿಂದ ದಿನಗೂಲಿ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಆ) 01-07-84ರ ನಂತರ ಸೇರಿರುವ ದಿನಗೂಲಿ ನೌಕರರನ್ನು ಸಕ್ರಮಗೊಳಿಸಲು ಯಾವುದೇ ಸರ್ಕಾರದ ಆದೇಶ ಇರುವುದಿಲ್ಲ. ಇವರುಗಳು ದಿನಾಂಕ 1-7-84ರ ನಂತರ ಸೇರಿರುವ ದಿನಗೂಲಿ ನೌಕರರಾಗಿರುತ್ತಾರೆ.

ಇ) ದಿನಗೂಲಿ ನೌಕರರು ನ್ಯಾಯಾಲಯಕ್ಕೆ ಮೊರೆ ಹೋಗಿರುತ್ತಾರೆ. ಒಟ್ಟು 910 ಜನರು ನ್ಯಾಯಾಲಯಕ್ಕೆ ಹೋಗಿರುತ್ತಾರೆ.

ಈ) ನ್ಯಾಯಾಲಯದಿಂದ ಖಾಯಂ ಆಗಿರುವ 6 ಜನ:-

1. ಮಾನಪ್ಪ
2. ನರಸಿಂಹರಾಜು
3. ಹೆಚ್.ಕೆ. ಗೋವಿಂದರಾಜು
4. ಕೃಷ್ಣರಾಜ ಅರಸ್
5. ಎಂ.ಎನ್. ನಾಗೇಶ್
6. ಚಾಮಾಚಾರಿ